**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | |
|---|---|---|
| ಸಾಕ್ಷಿದಾರರ ಹೆಸರು | : ದೇವೆಂದ್ರಗೌಡ | ***P.W-6*** |
| ತಂದೆಯ ಹೆಸರು | : ಪಂಚಾಕ್ಷರಿಗೌಡ | ***C.W-8*** |
| ವಯಸ್ಸು | : 65 ವರ್ಷ | |
| ಉದ್ಯೋಗ | : ನಿವೃತ್ತ ನೌಕರ | |
| ವಾಸ | : ಕುಂಚೂರು | |

**ದಿನಾಂಕಃ 22-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-4 ನನ್ನ ಅಳಿಯ ಆಗಿರುತ್ತಾರೆ. ಚಾಸಾ-1, 5 ಮತ್ತು 6 ರವರ ಪರಿಚಯ ಇರುತ್ತದೆ. ಚಾಸಾ-1 ರವರ ಗಂಡ ಶಿವಯೋಗಿ ಹಾಗೂ 1 ಮತ್ತು 3 ನೇ ಆರೋಪಿತರ ಪರಿಚಯ ಇರುತ್ತದೆ.

2013 ರಲ್ಲಿ ಚಾಸಾ-1 ರವರನ್ನು 2 ನೇ ಆರೋಪಿಗೆ ಕೊಟ್ರೇಶ್ವರ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿ ಕೊಟ್ಟಿರುತ್ತಾರೆ. ವಿವಾಹ ಸಮಯದಲ್ಲಿ ಮದುವೆ ಮಾಡಿ ಕೊಡಿ ಬೇರೆ ಏನು ಬೇಡ ಎಂದು ಹೇಳಿದ್ದರು. ಮದುವೆಯಾದ ನಂತರ ಬಂಗಾರ ತೆಗೆದು ಕೊಂಡು ಬಾ ಮನೆ ಕಟ್ಟಿಸಲು 5 ಲಕ್ಷ ಹಣ ತೆಗೆದು ಕೊಂಡು ಬಾ ಮತ್ತು ಕಾರ್ ಬೇಕು ಎಂದು ಆರೋಪಿತರು ಬೇಡಿಕೆ ಇಟ್ಟಿರುತ್ತಾರೆ. ಈ ವಿಚಾರವನ್ನು ಚಾಸಾ-1 ರವರು ನನಗೆ ಹೇಳಿರುತ್ತಾರೆ. ಈ ಬಗ್ಗೆ ನಾವು ಪಂಚಾಯಿತಿ ಮಾಡಲು ಬಂದಿದ್ದೇವು. ಆಗ ನಾನು ಆರೋಪಿಗೆ ಬುದ್ಧಿವಾದ ಹೇಳಿದ್ದೇನು. ಬುದ್ಧಿವಾದ ಹೇಳಿದರೂ ಸಹ ಆರೋಪಿತರು ತಿದ್ದಿಕೊಂಡಿರುವುದಿಲ್ಲ. 2 ನೇ ಆರೋಪಿ ಮದ್ಯಪಾನ ಮಾಡಿ ಬಂದು ಚಾಸಾ-1 ರವರ ಜೊತೆ ಜಗಳವಾಡುತ್ತಿದ್ದರು. ಚಾಸಾ-1 ರವರ ಹೆರಿಗೆಯಾದ ನಂತರವೂ ಆರೋಪಿತರು ಬಂದು ಆಕೆಯನ್ನು ಕರೆದು ಕೊಂಡು

ಹೋಗಿರುವುದಿಲ್ಲ. ಚಾಸಾ-1 ರವರ ಮನೆಯವರೇ ಆಕೆಯನ್ನು ಕರೆದು ಕೊಂಡು ಬಂದು ಆರೋಪಿತರ ಮನೆಗೆ ಬಿಟ್ಟು ಹೋಗಿರುತ್ತಾರೆ. ಆ ಸಮಯದಲ್ಲಿ ಅಕ್ಕ-ಪಕ್ಕದ ಮನೆಯವರೆಲ್ಲಾ ಬುದ್ಧಿವಾದ ಹೇಳಿದರೂ ಸಹ ಆರೋಪಿತರು ಹಣ ಕೊಡದೇ ಇದ್ದರೆ ಚಾಸಾ-1 ರವರನ್ನು ಒಳಗೆ ಬಿಟ್ಟು ಕೊಳ್ಳುವುದಿಲ್ಲ ಎಂದು ಹೇಳಿರುತ್ತಾರೆ. ಚಾಸಾ-1 ರವರನ್ನು ಅವರ ಮನೆಯವರು ಆರೋಪಿತರ ಮನೆಯಲ್ಲಿ ಬಲವಂತವಾಗಿ ಬಿಟ್ಟುಹೋಗಿರುತ್ತಾರೆ. ಆರೋಪಿತರು ಆಕೆಗೆ ಕಿರುಕುಳ ಕೊಡುವುದನ್ನು ಮುಂದುವರೆಸಿರುತ್ತಾರೆ. ಹಣ ತರಲಿಲ್ಲ ಎಂದು ಆಕೆಗೆ ಕಿರುಕುಳ ಕೊಡುವುದನ್ನು ಮುಂದುವರೆಸಿರುತ್ತಾರೆ. ಈ ರೀತಿಯ ಗಲಾಟೆ ಸುಮಾರು 10 ವರ್ಷಗಳಿಂದ ನಡೆಯುತ್ತಿದ್ದರಿಂದ ಈ ಬಗ್ಗೆ ದೂರನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ನಾನು ಪೊಲಿಸರಿಗೆ ಈ ಎಲ್ಲಾ ಮಾಹಿತಿ ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು , ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಿಶ್ಚಿತಾರ್ಥದ ಸಮಯದಲ್ಲಿ ಯಾವುದೇ ಬೇಡಿಕೆ ಇಡದೇ ನಂತರ 5 ಲಕ್ಷ ರೂಪಾಯಿ ಹಣ , 25 ತೊಲ ಬಂಗಾರ ಮತ್ತು 3 ಕೆ.ಜಿ ಬೆಳ್ಳಿ ಬೇಕು ಎಂದು ಆರೋಪಿತರು ಬೇಡಿಕೆ ಇಟ್ಟಿರುತ್ತಾರೆ ಎಂದರೆ ಸರಿ. ಹಿರಿಯರೆಲ್ಲಾ ಸಂದಾನ ಮಾಡಿ ಹಣದ ಬದಲಿಗೆ 250 ಗ್ರಾಂ ಬಂಗಾರ, 2 ½ ಕೆ.ಜಿ.ಬೆಳ್ಳಿಯನ್ನು ಕೊಟ್ಟು, ಮನೆಯ ಸಾಮಾನುಗಳನ್ನು ಕೊಟ್ಟು 8 ಲಕ್ಷ ಖರ್ಚು ಮಾಡಿ ಚಾಸಾ-1 ರವರ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಈ ಕೇಸಿನಲ್ಲಿ ಚಾಸಾ-1 ರವರಿಗೆ ಕಿರುಕುಳ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಚಾಸಾ-1 ರವರು ಗರ್ಭಿಣಿಯಾದಾಗ ಮಗು ಬೇಡ ಗರ್ಭಪಾತ ಮಾಡು ಎಂದು ಆರೋಪಿತರು ಒತ್ತಾಯಿಸಿದ್ದರು. ಹೆರಿಗೆಯಾಗಿ 8 ತಿಂಗಳವಾದ ನಂತರವೂ ಆರೋಪಿತರು ಚಾಸಾ-1 ಮತ್ತು ಮಗುವನ್ನು ಕರೆದು ಕೊಂಡು ಹೋಗಿರುವುದಿಲ್ಲ ಎಂದರೆ ಸರಿ. ಪಂಚಾಯಿತಿ ಕಾಲಕ್ಕೆ ಹೆಬ್ಬಾರ, ಚಾಸಾ-9 ಮತ್ತು ಚಾಸಾ-10 ರವರು ಹಾಜರು ಇದ್ದರು ಎಂದರೆ ಸರಿ. ಪೋಲಿಸರಿಗೆ ನಾನು ಈ ಎಲ್ಲಾ ವಿಚಾರವನ್ನು ಹೇಳಿಕೆ ಕೊಡುವ ಸಮಯದಲ್ಲಿ ಹೇಳಿರುತ್ತೇನೆ.

**P.W-6**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಆರ್.ಎಂ.ಎಂ. ವಕೀಲರಿಂದಃ**

ನನಗೆ 3 ನೇ ಆರೋಪಿ ಸುಮಾರು 30 ವರ್ಷಗಳಿಂದ ಗೊತ್ತಿರುತ್ತಾರೆ. ಅವರು ಈಗ ಬೆಂಗಳೂರಿನಲ್ಲಿ ಇರುತ್ತಾರೆ. ಸುಮಾರು 4/5 ವರ್ಷಗಳಿಂದ ಅವನು ಬೆಂಗಳೂರಿನಲ್ಲಿ ಇರುತ್ತಾರೆ. ಚಾಸಾ-1 ರವರ ಮದುವೆ ಕಾಲಕ್ಕೆ 3 ನೇ ಆರೋಪಿ ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದ ಎಂದರೆ ಸಾಕ್ಷಿ ಅವರು ಆಗ ವಿದ್ಯಾಭ್ಯಾಸ ಮಾಡುತ್ತಿದ್ದ ಎಂದು ಹೇಳುತ್ತಾರೆ. 8/10 ವರ್ಷಗಳ ಹಿಂದೆ 3 ನೇ ಆರೋಪಿ ವಿವಾಹ ಆಗಿರುತ್ತಾರೆ. ಚಾಸಾ-4 ನನ್ನ ಅಣ್ಣನ ಮಗನಾಗಬೇಕು. ಕುಂಚೂರು ಮತ್ತು ಕೊಟ್ಟೂರಿಗೆ ಸುಮಾರು 45 ಕಿ.ಮೀ ಅಂತರ ಇರುತ್ತದೆ. ಚಾಸಾ-4 ರವರು ನನ್ನ ಅಣ್ಣ ಹಾಲನಗೌಡ ರವರ ಅಳಿಯನಾಗಿರುತ್ತಾನೆ. ಕೊಟ್ಟೂರಿನಲ್ಲಿ ಚಾಸಾ-4 ರವರ ಸಂಬಂಧಿಕರು ಇರುತ್ತಾರೆ ಎಂದರೆ ಸರಿ. ಚಾಸಾ-1, ಚಾಸಾ-4, ಚಾಸಾ-5 ಮತ್ತು ಚಾಸಾ-6 ರವರ ಬಗ್ಗೆ ಕೊಟ್ಟೂರಿನಲ್ಲಿರುವ ಸಂಬಂಧಿಕರಿಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಆರೋಪಿತರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಜಂಬಗಿ ಕುಟುಂಬ ರಾಣೇಬೆನೂರಿನಲ್ಲಿಯೇ ಹೆಸರಾಂತ ಕುಟುಂಬ ಎಂದರೆ ಸರಿ . ಚಾಸಾ-1 ರವರನ್ನು 2 ನೇ ಆರೋಪಿಯ ಜೊತೆ ವೈವಾಹಿಕ ಜೀವನ ನಡೆಸಲು ಆಕೆಯ ತಂದೆ-ತಾಯಿಯೇ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ತಮ್ಮ ಮನೆಯಲ್ಲಿಯೆ ಇರಬೇಕು ಎನ್ನುವುದು ಚಾಸಾ-1 ಹಾಗೂ ಅವರ ತಂದೆ-ತಾಯಿಯ ಭಾವನೆಯಾಗಿತ್ತು ಎಂದರೆ ಸರಿಯಲ್ಲ.

ಚಾಸಾ-1 ರವರಿಗೆ ಹೆರಿಗೆಯಾದ ನಂತರ ಚಾಸಾ-1 ರವರನ್ನು ಕರೆದು ಕೊಂಡು ಹೋಗಿ ಎಂದು ಆರೋಪಿತರಿಗೆ ನಾನು ಫೋನ್ ಹೇಳಿರುತ್ತೇನೆ ಪತ್ರ ವ್ಯವಹಾರ ಮಾಡಿರುವುದಿಲ್ಲ. ಯಾರ ಫೋನ್ ಗೆ ಫೋನ್ ಮಾಡಿದ್ದೆ ಎಂದು ಈಗ ಹೇಳಲಾಗುವುದಿಲ್ಲ. ನಾನು ಈ ದಿನ ಕುಂಚೂರಿನಿಂದ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಚಾಸಾ-4 ಮತ್ತು 6 ರವರು ಕೊಟ್ಟೂರಿನಿಂದ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನಾವೆಲ್ಲರೂ ಕೂಡಿಯೇ ಇರುತ್ತೇವೆ ಎಂದರೆ ಸರಿ. ಚಾಸಾ-1 ರವರನ್ನು ಕರೆದು ಕೊಂಡು ಹೋಗಿ ಎಂದು ಆರೋಪಿತರಿಗೆ ಕೋರ್ಟ

ಮುಖಾಂತರವಾಗಿ ಆಗಲೀ ಅಥವಾ ವಕೀಲರ ಮೂಲಕ ನೋಟಿಸ್ ಮೂಲಕವಾಗಲೀ ಪ್ರಯತ್ನ ಮಾಡಿರುವುದಿಲ್ಲ. ಚಾಸಾ-1 ರವರು ದೂರನ್ನು ಕೊಡುವಾಗ ನಾನೂ ಸಹ ಠಾಣೆಯಲ್ಲಿ ಇದ್ದು ಪೋಲಿಸರಿಗೆ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳನ್ನು ಹೇಳಿರುತ್ತೇನೆ. ಆರೋಪಿತರು ಕಾರು ಬೇಕು ಎಂದು ನನ್ನ ಸಮಕ್ಷಮ ಹೇಳಿರುವುದಿಲ್ಲ. ಚಾಸಾ-1 ರವರನ್ನು ಮನೆಯಲ್ಲಿಯೇ ಇಟ್ಟುಕೊಳ್ಳಬೇಕು ಎಂದು ಆರೋಪಿತರು ಬಂಗಾರ, ಕಾರು ಮತ್ತು ಹಣ ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಂಚಾಯಿತಿ ಮಾಡುವ ಪೂರ್ವದಲ್ಲಿ ಸಾಮಾನ್ಯವಾಗಿ ಪಂಚಾಯ್ತಿದಾರರು ಪಕ್ಷಗಾರರು ತಮ್ಮ ಮಾತು ಕೇಳಬೇಕು ಎಂದು ಅವರಿಂದ ಸಹಿ ಪಡೆಯುತ್ತೇವೆ ಎಂದರೆ ಸರಿ. ಆರೋಪಿತರು ಮತ್ತು ಚಾಸಾ-1 ರವರ ಬಗ್ಗೆ ಪಂಚಾಯ್ತಿ ಮಾಡಿದಾಗ ನಾವು ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ. ಚಾಸಾ-1 ರವರನ್ನು ಯಾವ ತಾರೀಖಿಗೆ ಗಂಡನ ಮನೆಗೆ ಕಳುಹಿಸಲು ಬಂದಿದ್ದೇವು ಎಂದು ಈಗ ನೆನಪಿರುವುದಿಲ್ಲ. ಚಾಸಾ-1 ರವರು ಯಾವ ತಾರೀಖಿನಂದು ದೂರು ಕೊಟ್ಟಿರುತ್ತಾರೆ ಎಂದು ನನಗೆ ಈಗ ಹೇಳಲಾಗುವುದಿಲ್ಲ. ಚಾಸಾ-1 ಮತ್ತು ಅವರ ಮಗುವನ್ನು ಆರೋಪಿತರ ಮನೆಗೆ ಯಾವ ತಾರೀಖಿನಂದು ಕರೆದು ಕೊಂಡು ಹೋಗಿ ಬಿಟ್ಟಿರುತ್ತೇವೆ ಎಂದು ನನಗೆ ಈಗ ಹೇಳಲಾಗುವುದಿಲ್ಲ. ಮದುವೆಯ ಕಾಲಕ್ಕೆ ಆರೋಪಿಗೆ ಬಂಗಾರ , ಬೆಳ್ಳಿ ಮತ್ತು ಹಣ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಯಾವ ತಾರೀಖಿನಂದು ಅವುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಗರ್ಭಪಾತ ಮಾಡಿಸಿಕೊಳ್ಳಿ ಎಂದು ಅರೋಪಿತರು ಚಾಸಾ-1 ರವರಿಗೆ ಹೇಳಿದ್ದರು ಎಂದು ಚಾಸಾ-1 ರವರು ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ಮಗಳನ್ನು ಕಳುಹಿಸಲು ಹೋಗುವಾಗ ಆರೋಪಿತರಿಗೆ ಪೋನ್ ಮಾಡಿಕೊಂಡೆ ಚಾಸಾ-4 ರಿಂದ 6 ರವರು ಕರೆದು ಕೊಂಡು ಹೋಗಿದ್ದರು . 2 ನೇ ಆರೋಪಿ ಒಳ್ಳೆ ಕೆಲಸಗಾರ ಎಂದು ಅವರ ಇಲಾಖೆಯಲ್ಲಿ ಹೆಸರು ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

**P.W-6**

ಚಾಸಾ-1 ರವರನ್ನು ಅವರ ತಂದೆ-ತಾಯಿ ಗಂಡನ ಮನೆಗೆ ಕಳುಹಿಸಿಯೇ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ಚಾಸಾ-1 ರವರಿಗೆ ವರದಕ್ಷಿಣೆ ತೆಗೆದು ಕೊಂಡು ಬಾ ಎಂದು ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ಪಂಚಾಯ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚಾಯ್ತಿ ಮಾಡುವ ಕಾಲಕ್ಕೆ ಹೆಬ್ಬಾರ , ಚಾಸಾ-9 ಮತ್ತು 10 ರವರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆ ತೆಗೆದು ಕೊಂಡಿರುವುದಿಲ್ಲ. ಚಾಸಾ-1, 4 ರಿಂದ 6 ರವರು ನನ್ನ ಸಂಬಂಧಿಕರು ಆಗಿದ್ದರಿಂದ ಆರೋಪಿತರಿಗೆ ಕಿರುಕುಳ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಅರವಿಂದ.ಹೆಚ್.ಎನ್ | ***P.W-5*** |
| ತಂದೆಯ ಹೆಸರು | : ಪ್ರಭಾಕರ ಹೆಚ್.ಎನ್ | ***C.W-6*** |
| ವಯಸ್ಸು | : 38 ವರ್ಷ | |
| ಉದ್ಯೋಗ | : ಝುರಾಕ್ಸ ಅಂಗಡಿ ಕೆಲಸ | |
| ವಾಸ | : ಕೊಟ್ಟೂರು. | |

**ದಿನಾಂಕಃ 22-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಅಕ್ಕನಾಗಬೇಕು. ಚಾಸಾ-4 ಮತ್ತು 5 ನನ್ನ ತಂದೆ-ತಾಯಿ ಆಗಿರುತ್ತಾರೆ. 2 ನೇ ಆರೋಪಿ ನನ್ನ ಅಕ್ಕನ ಗಂಡನಾಗಿರುತ್ತಾರೆ. 1 ನೇ ಆರೋಪಿ 2 ನೇ ಆರೋಪಿಯ ತಾಯಿ ಆಗಿರುತ್ತಾರೆ. 3 ನೇ ಆರೋಪಿ 2 ನೇ ಆರೊಪಿಯ ತಮ್ಮನಾಗಿರುತ್ತಾರೆ.

2015 ರಲ್ಲಿ ಚಾಸಾ-1 ರವರನ್ನು 2 ನೇ ಆರೋಪಿಗೆ ಕೊಟ್ರೇಶ್ವರ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿ ಕೊಟ್ಟಿರುತ್ತೇವೆ. ವಿವಾಹ ಸಮಯದಲ್ಲಿ ವರದಕ್ಷಿಣೆ ಯಾಗಿ ಐದು ಲಕ್ಷ ರೂಪಾಯಿ ನಗದು ಹಣ, 25 ತೊಲ ಬಂಗಾರ , 3 ಕೆ.ಜಿ. ಬೆಳ್ಳಿ ಕೊಡಬೇಕು ಎಂದು ಕೇಳಿದ್ದರು. ನಾವು ಅವುಗಳನ್ನೆಲ್ಲಾ ಆರೋಪಿತರಿಗೆ ಕೊಟ್ಟಿರುತ್ತೇವೆ ಮತ್ತು ಮದುವೆಯ ಖರ್ಚನ್ನು ಸಹ ನಾವೇ ಭರಿಸಿರುತ್ತೇವೆ. ಮದುವೆಯ ನಂತರ ಚಾಸಾ-1 ರವರು ತಮ್ಮ ಗಂಡನ ಮನೆಯಾದ ರಾಣೇಬೆನ್ನೂರಿನ ಮೃತ್ಯುಂಜಯ ನಗರಕ್ಕೆ ಹೋಗಿ ಅಲ್ಲಿ ಆರೋಪಿತರ ಜೊತೆ ಒಟ್ಟಿಗೆ ವಾಸವಾಗಿದ್ದರು. ಅಲ್ಲಿ 3 ತಿಂಗಳು ಚಾಸಾ-1 ಮತ್ತು 2 ನೇ ಆರೋಪಿ ಚೆನ್ನಾಗಿ ಜೀವನ ಮಾಡಿರುತ್ತಾರೆ. ನಂತರ ಮನೆ ಕಟ್ಟಬೇಕು ಎಂದು 2 ನೇ ಆರೋಪಿ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅದಕ್ಕೆ ನಾವು ಕೊಡುತ್ತೇವೆ ಎಂದು ಹೇಳಿರುತ್ತೇವೆ . ನಂತರ ನನ್ನ ಅಕ್ಕ ಗರ್ಭಿಣಿಯಾಗಿದ್ದು ಆರೋಪಿತರು ಆ ಮಗುವಿನ ಅವಶ್ಯಕತೆ ಇಲ್ಲ ಗರ್ಭಪಾತ ಮಾಡಿಸಿ ಎಂದು ಬಲವಂತ ಪಡಿಸಿರುತ್ತಾರೆ. ಅದಕ್ಕೆ ಅಕ್ಕ ಒಪ್ಪಿರಲಿಲ್ಲ. ನಾವೇ ಚಾಸಾ-1 ರವರ ಸಿಮಂತ ಕಾರ್ಯ ಮಾಡಿ ಕರೆದು ಕೊಂಡು ಹೋಗಿರುತ್ತೇವೆ. ನನ್ನ

ಅಕ್ಕನಿಗೆ ಡಿಲಿವರಿಯಾಗಿ 8 ತಿಂಗಳು ಆದರೂ ಸಹ ಆರೋಪಿತರು ಯಾರು ನೋಡಲು ಬಂದಿರುವುದಿಲ್ಲ. ನಾವೇ ಚಾಸಾ-1 ರವರನ್ನು ಕರೆದು ಕೊಂಡು ಗಂಡನ ಮನೆಗೆ ಹೋಗಿ ಬಿಟ್ಟು ಬರಲು ಹೋದಾಗ ನಮ್ಮ ಜೊತೆ ಆರೋಪಿತರು ಜಗಳ ಮಾಡಿ ನಮಗೆ ಅವಮಾನ ಮಾಡಿರುತ್ತಾರೆ. ನಮ್ಮನ್ನೆಲ್ಲಾ ಮನೆಯಿಂದ ಹೊರಗೆ ಕಳುಹಿಸಿರುತ್ತಾರೆ. ನನ್ನ ಅಕ್ಕಳು ಒಬ್ಬಳೆ ಅಲ್ಲಿ ಇದ್ದು ನಾನು ನೋಡಿಕೊಳ್ಳುತ್ತೇನೆ ನೀವು ಹೋಗಿ ಎಂದು ನಮ್ಮನ್ನು ಆಕೆ ಕಳುಹಿಸಿರುತ್ತಾರೆ. ಮೇಲೆ ಮನೆ ಕಟ್ಟಲು 4 ಲಕ್ಷ ಹಣ ಬೇಕು ಎಂದು ಆರೋಪಿತರು ಬೇಡಿಕೆ ಇಟ್ಟು ನನ್ನ ಅಕ್ಕನ ಜೊತೆ ಗಲಾಟೆ ಮಾಡಿರುತ್ತಾರೆ. ನನ್ನ ಅಕ್ಕ ಮನೆಯಲ್ಲಿ ಒಬ್ಬಳೆ ಇದ್ದಾಗ ಆರೋಪಿತರೇ ಮನೆಗೆ ಕಲ್ಲು ಎಸೆದು ಆಕೆಗೆ ಹಿಂಸೆ ಕೊಟ್ಟಿರುತ್ತಾರೆ. ನಂತರ ನಾವು ಆ ಏರಿಯಾದ ಅಕ್ಕ-ಪಕ್ಕದ ಮನೆಯವರನ್ನೆಲ್ಲಾ ಕರೆದು ಪಂಚಾಯಿತಿ ಮಾಡಿರುತ್ತೇವೆ. ನಂತರ 2-3 ದಿನ ಚೆನ್ನಾಗಿ ಇದ್ದು ಅದೇ ರೀತಿ ಚಿತ್ರಹಿಂಸೆ ಕೊಡಲು ಪ್ರಾರಂಭಿಸಿರುತ್ತಾರೆ. ನಂತರ ನಾವು ಪೋಲಿಸ್ ದೂರನ್ನು ಕೊಟ್ಟು ನಮ್ಮ ಅಕ್ಕನನ್ನು ವಾಪಸ್ಸು ಕರೆದು ಕೊಂಡು ಹೋಗಿರುತ್ತೇವೆ. ಈ ಎಲ್ಲಾ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಆರ್.ಎಂ.ಎಂ.ವಕೀಲರಿಂದಃ**

ನಾನು ಬಿ.ಎ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಕ್ಕ ಚಾಸಾ-1 ಸಹ ಪದವಿದರರಾಗಿರುತ್ತಾರೆ ಎಂದರೆ ಸರಿ. ನನ್ನ ಅಕ್ಕ ಮದುವೆಗಿಂತ ಮುಂಚೆ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಳು ಆದರೆ ಮದುವೆಯ ನಂತರ ಆ ಕೆಲಸ ಬಿಟ್ಟಿರುತ್ತಾಳೆ. ನನ್ನ ಅಕ್ಕ 2 ನೇ ಆರೋಪಿಯನ್ನು ಬಿಟ್ಟುಹೋದ ನಂತರ ಹಂಗಾಮಿ ನೌಕರಳಾಗಿ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ನಾನು ಝುರಾಕ್ಸ ಮತ್ತು ಸ್ಟೇಶನರಿ ಅಂಗಡಿ ಇಟ್ಟು ಕೊಂಡಿರುತ್ತೇನೆ ಎಂದರೆ ಸರಿ. ನಾನು ಇದೇ ಪ್ರಥಮ ಬಾರಿಗೆ ಮೇಲೆ ಹೇಳಿದಂತೆ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿ. 2 ನೇ ಆರೋಪಿ ಕೆ.ಇ.ಬಿ. ಯಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರ ಸರಿ. 3 ನೇ ಆರೋಪಿ ನನ್ನ ಅಕ್ಕ ಮದುವೆಯಾಗುವುದಕ್ಕಿಂತ ಮುಂಚಿತವಾಗಿ ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ.

**P.W-5**

ರಾಣೇಬೆನ್ನೂರಿನಲ್ಲಿ ಜಂಬಗಿ ಕುಟುಂಬ ಒಂದು ಹೆಸರಾಂತ ಕುಟುಂಬ ಎಂದರೆ ಸರಿ. 2 ಮತ್ತು 3 ನೇ ಆರೋಪಿಗೆ ಒಳ್ಳೆ ಸಂಬಳ ಬರುವ ಕೆಲಸವೂ ಇದೆ ಮತ್ತು ಆದಾಯವೂ ಇದೆ ಎಂದರೆ ಸರಿ. ನನ್ನ ಅಕ್ಕ ನಮ್ಮ ತಂದೆ-ತಾಯಿಗಳಿಗೆ ಒಬ್ಬಳೆ ಹೆಣ್ಣುಮಗಳು ಎಂದರೆ ಸರಿ. ಆದ್ದರಿಂದ ನಾವು ಆಕೆಯನ್ನು ಅತೀ ಪ್ರೀತಿಯಿಂದ ನೋಡುತ್ತೇವೆ ಎಂದರೆ ಸರಿ. ಆರೋಪಿತರು ನಮ್ಮ ಅಕ್ಕನನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಆಕೆ ಈಗ ನಮ್ಮ ಮನೆಯಲ್ಲಿ ಇದ್ದಾಳೆ. ನನ್ನ ಅಕ್ಕನನ್ನು ಆರೋಪಿತರು ಸರಿಯಾಗಿ ನೋಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರಿಂದ ಇಲ್ಲಿಯವರೆಗೂ ನನ್ನ ಅಕ್ಕನನ್ನು ಗಂಡನ ಮನೆಗೆ ಕಳುಹಿಸಲು ನೀವು ಏನು ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿ ಪ್ರಯತ್ನ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಆ ಬಗ್ಗೆ ಯಾವುದೇ ಕೇಸು ಮಾಡಿರುವುದಿಲ್ಲ. ನನ್ನ ಅಕ್ಕನನ್ನು ಅವರ ಗಂಡನ ಮನೆಗೆ ಕಳುಹಿಸಲು ಯಾವುದೇ ರೀತಿಯ ಪ್ರಯತ್ನ ಮಾಡದೇ ಇದ್ದರೂ ಸಹ ಪ್ರಯತ್ನ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಿನ ನಾನು, ನನ್ನ ತಂದೆ ಮತ್ತು ಚಾಸಾ-8 ರವರು ಕೂಡಿ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿ. ಚಾಸಾ-1 ರವರು ಒಬ್ಬಳೆ ಮಗಳಾಗಿದ್ದರಿಂದ ತಮ್ಮ ಜೊತೆಗೆ ಬಂದು ಇರಲಿ ಎಂದು ನಾವೆಲ್ಲರೂ ಸೇರಿ 2 ನೇ ಆರೋಪಿಗೆ ಕಿರುಕುಳ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿ ತನ್ನ ತಮ್ಮ ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದು ತಾಯಿಯನ್ನು ನೋಡಿಕೊಳ್ಳಲು ಯಾರು ಇಲ್ಲ ಎಂದು ನಮ್ಮ ಕೋರಿಕೆಯನ್ನು ತಿರಸ್ಕರಿಸಿದ್ದ ಎಂದರೆ ಸರಿಯಲ್ಲ. ಆರೋಪಿತರಿಗೆ ಐದು ಲಕ್ಷ ನಗದು ಹಣ , 23 ತೊಲ ಬಂಗಾರ ಮತ್ತು 3 ಕೆ.ಜಿ ಬೆಳ್ಳಿಯನ್ನು ವರದಕ್ಷಿಣೆಯಾಗಿ ಕೊಟ್ಟ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ನಮ್ಮ ತಂದೆಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ಮದುವೆಯ ಸಮಯದಲ್ಲಿ ವರದಕ್ಷಿಣೆ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ವರದಕ್ಷಿಣೆ ಕೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕ ಗರ್ಭಿಣಿಯಾಗಿದ್ದಾಗ ಆರೋಪಿತರು

ಆಕೆಗೆ ಗರ್ಭಪಾತ ಮಾಡಿಸು ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಕ್ಕನನ್ನು ಮತ್ತು ಮಗುವನ್ನು ಆರೋಪಿತರ ಮನೆಗೆ ಕರೆದು ಕೊಂಡು ಹೋಗುವಾಗ ಅವರಿಗೆ ಪೋನ್ ಮಾಡಿ ತಿಳಿಸಿಯೇ ಹೋಗಿದ್ದೇವು. ಆ ಬಗ್ಗೆ ದಾಖಲೆ ಏನು ಇರುವುದಿಲ್ಲ. ನಾನು , ನನ್ನ ತಂದೆ ಚಾಸಾ-1 ರವರನ್ನು ಆರೋಪಿತರ ಮನೆಗೆ ಕರೆದು ಕೊಂಡು ಬಂದಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾವು ಚಾಸಾ-1 ರವರನ್ನು ಕರೆದು ಕೊಂಡು ಹೋಗಿರದ ಕಾರಣ ಆರೋಪಿತರು ನಮ್ಮ ಜೊತೆ ಜಗಳ ಮಾಡುವ ಪ್ರಮೇಯವೇ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನನ್ನು ಆರೋಪಿತರು ಮನೆಗೆ ಕರೆದು ಕೊಳ್ಳುವ ಬಗ್ಗೆ ಯಾವತ್ತೂ ಯಾವುದೇ ಜಗಳವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು , ನನ್ನ ತಂದೆ ಹಾಗೂ ನನ್ನ ಅಕ್ಕ ಸೇರಿ 2 ನೇ ಆರೋಪಿಯ ದಾಂಪತ್ಯ ಜೀವನವನ್ನೆ ಹಾಳು ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿ ಈಗಲೂ ಸಹ ಮಾನಸಿಕವಾಗಿ ಅದರಿಂದ ಕೊರಗುತ್ತಿದ್ದಾನೆ ಎಂದರೆ ಸರಿಯಲ್ಲ. ಈ ಹಿಂದೆ ನ್ಯಾಯಾಲಯ ಪಂಚಾಯಿತಿ ಮಾಡಿ ಕೂಡಿಕೊಂಡು ಹೋಗಿ ಎಂದು ತಿಳಿಸಿದ್ದರೂ ಸಹ ಅದಕ್ಕೆ ನಾವು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಆರೋಪಿಯ ಜೊತೆ ನನ್ನ ಅಕ್ಕನ ಮದುವೆಯಾದ ನಂತರ 3 ನೇ ಆರೋಪಿಯ ಮದುವೆ ಆಗಿರುತ್ತದೆ ಎಂದರೆ ಸರಿ. 3 ನೇ ಆರೋಪಿ ಮತ್ತು ಅವರ ಹೆಂಡತಿ ಅನ್ಯೂನ್ಯವಾಗಿಯೇ ಇದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೆ ತೊಂದರೆ ಕೊಡಬೇಕು ಎಂದು ಅವರು ವರದಕ್ಷಿಣೆ ಬೇಡಿಕೆ ಇಟ್ಟು ಕಿರುಕುಳ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.